# ಏರ್‌ಟೆಲ್ ವೈ–ಫೈ ಕಾಲ್

■ ಸಿರಿ




## ಯಾವ ಫೋನ್‌ಗಳಲ್ಲಿ?

**ಐಫೋನ್:**
- ಎಕ್ಸ್‌ಆರ್‌ಐ
- ಐಫೋನ್ 6 ಎಸ್
- ಐಫೋನ್ 6 ಎಸ್ ಪ್ಲಸ್
- ಐಫೋನ್ 7
- ಐಫೋನ್ 7 ಪ್ಲಸ್
- ಐಫೋನ್ ಎಸ್‌ಇ
- ಐಫೋನ್ 8
- ಐಫೋನ್ 8 ಪ್ಲಸ್
- ಐಫೋನ್ ಎಕ್ಸ್
- ಐಫೋನ್ ಎಕ್ಸ್ ಮ್ಯಾಕ್ಸ್
- ಐಫೋನ್ 11
- ಐಫೋನ್ 11 ಪ್ರೊ.

**ಒನ್+**
- ಒನ್+ 7
- ಒನ್+ 7 ಪ್ರೊ
- ಒನ್+ 7 ಟಿ
- ಒನ್+ 7 ಟಿ ಪ್ರೊ.

**ಶಿಯೋಮಿ:**
- ಪೋಕೊ ಎಫ್ 1
- ರೆಡ್‌ಮಿ 5
- ರೆಡ್‌ಮಿ ಕೆ 20
- ರೆಡ್‌ಮಿ 5
- ರೆಡ್‌ಮಿ ಕೆ 20 ಪ್ರೊ.

**ಸ್ಯಾಮ್‌ಸಂಗ್:**
- ಜೆ 6
- ಸ್ಯಾಮ್‌ಸಂಗ್ 6
- ಎಂ 30 ಎಸ್
- ಎ 10 ಎಸ್
- ಎಂ 20
- ಎಸ್ 10 ಇ
- ಎಸ್ 10
- ಎಸ್ 10 ಪ್ಲಸ್

ರಿಲಯನ್ಸ್ ಜಿಯೊ ನೆಟ್‌ವರ್ಕ್‌ನ ವಿವಿಧ ರೀತಿಯ ಆಫರ್‌ಗಳ ಪೈಪೋಟಿಯಿಂದಾಗಿ ಹೊಡೆತ ತಿಂದಿರುವ ಭಾರ್ತಿ ಏರ್‌ಟೆಲ್ ಸಂಸ್ಥೆ, ಗ್ರಾಹಕರನ್ನು ಆಕರ್ಷಿಸುವ ಸಲುವಾಗಿ ಇದೇ ಮೊದಲ ಬಾರಿಗೆ ದೇಶದಲ್ಲಿ ವೈ–ಫೈ ಕಾಲಿಂಗ್ ವ್ಯವಸ್ಥೆಯನ್ನು ಈಚೆಗೆ ಪರಿಚಯಿಸಿದೆ. ಬೇರೆ ಯಾವ ಟೆಲಿಕಾಮ್ ಸಂಸ್ಥೆಗಳೂ ಈ ಸೌಕರ್ಯವನ್ನು ಇನ್ನೂ ಜಾರಿಗೆ ತಂದಿಲ್ಲ.

ಈ ವೈಫೈ ಕಾಲಿಂಗ್ ಸೇವೆ ಮುಂಬೈ, ಕೋಲ್ಕತಾ ಸೇರಿದಂತೆ ದಕ್ಷಿಣದ ಮೂರು ನಗರಗಳಲ್ಲಿ ಲಭ್ಯವಾಗಲಿದೆ ಎನ್ನಲಾಗಿದ್ದು, ಈ ಸೇವೆಯನ್ನು ತಮಿಳುನಾಡು, ಕರ್ನಾಟಕ ಮತ್ತು ಆಂಧ್ರ ಪ್ರದೇಶದ ಕೆಲ ನಗರಗಳಿಗೆ ವಿಸ್ತರಿಸಲು ಏರ್‌ಟೆಲ್ ನಿರ್ಧರಿಸಿದೆ.

‘ಏರ್‌ಟೆಲ್ ವೈಫೈ ಕಾಲಿಂಗ್’ ವ್ಯವಸ್ಥೆ ಸಾಮಾನ್ಯ ನೆಟ್‌ವರ್ಕ್ ಕಾಲಿಂಗ್ ವ್ಯವಸ್ಥೆಯ ಉನ್ನತ ಹಂತ. ವೈಫೈ ಸೇವೆಯನ್ನು ಬಳಸಿಕೊಂಡು ಕರೆ ಮಾಡುವ ವಿಧಾನವಿದು. ಸಾಮಾನ್ಯ ನೆಟ್‌ವರ್ಕ್ ಇಲ್ಲದ ಕಡೆಗಳಲ್ಲಿ ಕೇವಲ ವೈಫೈ ಸೌಲಭ್ಯ ಮಾತ್ರ ಇರುತ್ತದೆ. ಅಂತಹ ಸಂದರ್ಭದಲ್ಲಿ ವೈ–ಫೈ ಬಳಸಿಕೊಂಡು ಕರೆ ಮಾಡಬಹುದು. ಸಿಗ್ನಲ್ ದುರ್ಬಲವಾಗಿದ್ದರೂ ಸ್ಪಷ್ಟವಾದ ಧ್ವನಿ ಹಾಗೂ ಗುಣಮಟ್ಟದ ಕರೆಯ ಸೇವೆಯನ್ನು ಒದಗಿಸುವುದು ಇದರ ವಿಶೇಷತೆ.

ವೇಗದ ಕಾರ್ಯಕ್ಷಮತೆಗೆ ಅನುಗುಣವಾಗಿ ಕಾರ್ಯನಿರ್ವಹಿಸಲು ಸಹಜವಾಗಿ ಕಚೇರಿಯಲ್ಲಿ, ಇಂಟರ್‌ನೆಟ್ ಮೇಲೆ ಅವಲಂಬಿತರಾಗುವವರು ಮನೆಗಳಲ್ಲಿ ವೈ–ಫೈ ಸಂಪರ್ಕ ಪಡೆದಿರುತ್ತಾರೆ. ಅಂತಹವರು ತಮ್ಮ ಮೊಬೈಲ್ ಅನ್ನು ವೈ–ಫೈನೊಂದಿಗೆ ಕನೆಕ್ಟ್ (ಸಂಪರ್ಕ) ಮಾಡಿ ಕರೆ ಮಾಡಬಹುದು.




ಏರ್‌ಟೆಲ್ ಜಾರಿಗೊಳಿಸಿರುವ ಈ ಸೌಲಭ್ಯದಿಂದಾಗಿ ಬಳಕೆದಾರರಿಗೆ ಹೆಚ್ಚು ಹೊರೆಯಾಗದು. ಐದು ನಿಮಿಷದ ಕರೆಗೆ ಕೇವಲ ಐದು ಎಂಬಿ ಡಾಟಾವನ್ನು ಇದು ಬಳಸಿಕೊಳ್ಳುತ್ತದೆ. ಒಂದು ವೇಳೆ ವೈಫೈ ನೆಟ್‌ವರ್ಕ್ ಆಫ್ ಆಗಿದ್ದರೆ ಅಥವಾ ಸಂಪರ್ಕವನ್ನು ದಿಢೀರನೇ ಕಳೆದುಕೊಂಡರೆ ಚಾಲ್ತಿಯಲ್ಲಿರುವ ವೈ–ಫೈ ಕರೆಯನ್ನು ವೋಲ್ಟ್‌ಗೆ (VoLTE) ಬದಲಾಯಿಸಿ ಯಾವುದೇ ಅಡಚಣೆ ಆಗದಂತೆ ಮಾತನಾಡಲು ಅವಕಾಶ ಕಲ್ಪಿಸಲಾಗಿದೆ. ಬಳಕೆದಾರರು ಹೊರ ರಾಜ್ಯಗಳಲ್ಲಿದ್ದಾಗ ವೈ–ಫೈ ಕರೆ ಮಾಡುವುದರಿಂದ ರೋಮಿಂಗ್ ಶುಲ್ಕಕ್ಕೆ ಕಡಿವಾಣ ಹಾಕಬಹುದು.

## ಸೆಟ್ಟಿಂಗ್ಸ್ ಮಾಡುವುದು ಹೇಗೆ?

ವೈ–ಫೈ ಸೇವೆ ಬಳಸಿಕೊಳ್ಳಲು ಬಯಸುವವರ ಬಳಿ ಆ ಸೇವೆಗೆ ಒಗ್ಗುವಂತಹ ಅತ್ಯಾಧುನಿಕ ಸ್ಮಾರ್ಟ್‌ಫೋನ್‌ಗಳು ಇರಬೇಕು. ಅಲ್ಲದೆ ಯಾವುದೇ ಪ್ರತ್ಯೇಕ ಆ್ಯಪ್ ಹಾಗೂ ಸಿಮ್‌ನ ಅಗತ್ಯವಿಲ್ಲ. ಮೊಬೈಲ್‌ನಲ್ಲಿ ಕೆಲವೊಂದು ಸೆಟ್ಟಿಂಗ್ಸ್ ಅನ್ನು ಬದಲಾಯಿಸಿಕೊಂಡರೆ ಸಾಕು.

ಮೊಬೈಲ್ ಇತ್ತೀಚಿನ ಸಾಫ್ಟ್‌ವೇರ್ ವರ್ಶನ್‌ಗೆ ಅಪ್‌ಗ್ರೇಡ್ ಆಗಿರಬೇಕು. ಏರ್‌ಟೆಲ್ ಬ್ರಾಡ್ ಬ್ಯಾಂಡ್ ಅನ್ನು ಸಕ್ರಿಯಗೊಳಿಸಿ ಅದನ್ನು ಮೊಬೈಲ್‌ನೊಂದಿಗೆ ಸಂಪರ್ಕಿಸಬೇಕು. ಬಳಿಕ ಬಳಕೆದಾರರು ತಮ್ಮ ಮೊಬೈಲ್‌ನಲ್ಲಿರುವ ವೋಲ್ಟ್ (VoLTE) ಸೆಟ್ಟಿಂಗ್ ಅನ್ನು ಆನ್ ಮಾಡಬೇಕು.

ಅದನ್ನು ಮಾಡಲು ಮೊಬೈಲ್‌ನ ಸೆಟ್ಟಿಂಗ್ಸ್‌ಗೆ ಹೋಗಿ ‘ಸಿಮ್ ಆ್ಯಂಡ್ ನೆಟ್‌ವರ್ಕ್ ಸೆಟ್ಟಿಂಗ್ಸ್’ನಲ್ಲಿ (SIM & Network Settings) ಕಾಣುವ ಏರ್‌ಟೆಲ್ ಸಿಮ್ ಆಯ್ಕೆಯ ಮೇಲೆ ಕ್ಲಿಕ್ಕಿಸಬೇಕು. ಹಾಗೆ ಮಾಡಿದ ತಕ್ಷಣ ‘ಆ್ಯಕ್ಟಿವೇಟ್ ಮೇಕ್ ಕಾಲ್ಸ್ ಯೂಸಿಂಗ್ ವೈ–ಫೈ’ (Activate Make Calls using WiFi) ಎಂಬ ಮತ್ತೊಂದು ಆಯ್ಕೆ ಕಾಣಿಸುತ್ತದೆ. ಅದನ್ನು ಕ್ಲಿಕ್ಕಿಸಿ ವೈ–ಫೈ ಕಾಲಿಂಗ್ ಆಯ್ಕೆಯನ್ನು ಆ್ಯಕ್ಟಿವೇಟ್ ಮಾಡಿದರೆ ಸುಲಭವಾಗಿ ಸಹಜ ಕರೆ ಮಾಡುವ ವಿಧಾನದಂತೆ ವೈ–ಫೈ ಕಾಲ್ ಮಾಡಬಹುದು.

ಬೇರೆ ಬೇರೆ ಮೊಬೈಲ್ ತಯಾರಿಕಾ ಕಂಪನಿಗಳು ಆಂಡ್ರಾಯ್ಡ್ ಕಾರ್ಯಾಚರಣೆ ವ್ಯವಸ್ಥೆಯಲ್ಲಿ ಕೆಲ ಬದಲಾವಣೆಗಳನ್ನು ಮಾಡಿರುವುದರಿಂದ ಒಂದೊಂದು ಫೋನ್‌ಗಳಲ್ಲಿ ಒಂದೊಂದು ರೀತಿಯ ಸೆಟ್ಟಿಂಗ್ಸ್ ವಿಧಾನವಿದೆ. ■